O.S. No. 144-2019
P.W. - 1

**<u>ದಿನಾಂಕಃ 29-07-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.</u>**

***<u>ಪಾಟೀ ಸವಾಲುಃ ಶ್ರೀ ಎಸ್ ಪಿ., ಮಾನ್ಯ ವಕೀಲರಿಂದ 1 ರಿಂದ 3 ನೇ ಪ್ರತಿವಾದಿಗಳ ಪರವಾಗಿಃ-</u>***

ನಾನು ಎಸ್ ಎಸ್ ಎಲ್ ಸಿ ವರೆಗೆ ಓದಿರುತ್ತೇನೆ. ನಾನು ಘಟನೆಯನ್ನು ಕಣ್ಣಾರೆ ನೋಡಿರುವುದಿಲ್ಲ ಎಂದರೆ ಸರಿ. ನಾನು ವಾದ ಪತ್ರದಲ್ಲಿ ತಿಳಿಸಿದ ಗಣೇಶ್ ಚೌತಿಯಂದು ಎಲ್ಲಾ ಶಾಲಾ ಕಾಲೇಜುಗಳಿಗೆ ರಜೆ ಇತ್ತು ಎಂದರೆ ಸರಿ. ನನ್ನ ಮೃತ ಮಗ 4 ನೇ ಪ್ರತಿವಾದಿಯ ವಿದ್ಯಾರ್ಥಿ ಆಗಿರಲಿಲ್ಲ ಎಂದರೆ ಸರಿ. ಯಾವುದೇ ಗಿಡಗಳಿಗೆ ವಿದ್ಯುತ್ ವೈಯರ್ ತಾಕಿದರೆ ಟ್ರಿಪ್ ಆಗಿ ವಿದ್ಯುತ್ ಪ್ರಸರಣ ನಿಂತು ಹೋಗುತ್ತದೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ ನಂಬರ 1 ರಿಂದ 3 ವಿದ್ಯುತ್ ವೈಯರನ್ನು ಸರಿಯಾಗಿ ಕಾನೂನು ರೀತಿಯಲ್ಲಿ ನಿರ್ವಹಣೆ ಮಾಡಿದ್ದರು ಎಂದರೆ ಸರಿಯಲ್ಲ. ನನ್ನ ಮಗ ಪ್ರತಿ ತಿಂಗಳು ಟ್ಯೂಷನ ಹೇಳಿಕೊಟ್ಟು ರೂ. 5000/- ಆದಾಯ ಹೊಂದಿದ್ದ ಅಂತಾ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ. ನನ್ನ ಮಗನ ಸಾವು ನನ್ನ ಮಗನ ನಿರ್ಲಕ್ಷ್ಯತನದಿಂದ ಆಗಿದೆಯೇ ಹೊರೆತು ಪ್ರತಿವಾದಿ ನಂಬರ 1 ರಿಂದ 3 ರವರ ನಿರ್ಲಕ್ಷ್ಯತನದಿಂದ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯಿಂದ ಕಾನೂನು ಬಾಹಿರವಾಗಿ ಪರಿಹಾರ ಪಡೆಯುವ ಉದ್ದೇಶದಿಂದ ಪ್ರತಿವಾದಿಯ ವಿರುದ್ಧ ಸುಳ್ಳು ದಾವೆ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಘಟನೆಗೆ ಪ್ರತಿವಾದಿ ನಂಬರ 1 ರಿಂದ 3 ಯಾವುದೇ ರೀತಿಯ ಹೊಣೆಗಾರಲ್ಲದಿದ್ದರೂ ಸಹಿತ ಅವರ ವಿರುದ್ಧ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚರಣೆ ಇಲ್ಲ.

**( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನೆಯ ಮೇರೆಗೆ ಬೆರಳಚ್ಚುಗಾರರು ಬೆರಳಚ್ಚು ಮಾಡಿರುತ್ತಾರೆ ಮತ್ತು ಅದನ್ನು ಸಾಕ್ಷಿಗೆ ಓದಿ ತಿಳಿಸಿ ಹೇಳಿದಾಗ ಸಾಕ್ಷಿ ಸರಿ ಇದೆ ಅಂತಾ ಒಪ್ಪಿ ಕೊಂಡಿರುತ್ತಾರೆ.)**

1 **ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು,**
**ರಾಯಚೂರು.**